ಮೂಲಕ ಇತಿಹಾಸವನ್ನು ಒಡೆದುಕಟ್ಟುತ್ತಾನೆ. ಅವನ ಬಹುತೇಕ ಬರಹಗಳು ನೆನಪಿನ ಮೂಲಕವೇ ತಮ್ಮ ವಿಶಿಷ್ಟ ಜಗತ್ತನ್ನು ನಮ್ಮ ಮುಂದಿಡುತ್ತವೆ. ಇಂಗ್ಲೆಂಡಿನಲ್ಲಿ ಹುಟ್ಟಿ ಬೆಳದರೂ ಜಪಾನೀಯನಾಗೇ ಮನೆಯಲ್ಲಿ ಬೆಳೆದವನಿಗೆ ಎರಡನೆಯ ವಿಶ್ವಯುದ್ಧ ಕಾಡದೇ ಇದ್ದೀತೇ?! ಅವನ ಮೊದಲೆರಡು ಕಾದಂಬರಿಗಳ ಕೇಂದ್ರಪಾತ್ರಗಳಾದ **Etsuko** ಮತ್ತು **Ono** ಅವರ ವೈಯುಕ್ತಿಕ ನೆಲೆಯ ನೆನಪುಗಳು ದೇಶವೊಂದರ ಇತಿಹಾಸವನ್ನು, ಜಗತ್ತಿನ ಇತಿಹಾಸವನ್ನು ನೆನಪಿಸುತ್ತಲೇ ಅವುಗಳನ್ನು ಒಡೆದು ಮನುಷ್ಯರ ವೈಯುಕ್ತಿಕ ಗತಕಾಲವನ್ನು ಪುನರ್ ರಚಿಸಿ ಇತಿಹಾಸವನ್ನು ಮರುಓದಿಗೆ, ವಿಮರ್ಶೆಗೆ ಗುರಿಪಡಿಸುತ್ತವೆ. ಜಗತ್ತು ಹೇಳುವ ಇಲ್ಲವೇ ಪಠ್ಯಕ್ರಮಗಳು ಹೇಳುವ ಇತಿಹಾಸಕ್ಕಿಂತ ವ್ಯಕ್ತಿಯೋರ್ವನ/ಳ ಖಾಸಗೀ ನೆನಪುಗಳು ಹೇಗೆ ಭಿನ್ನ ಎನ್ನುವುದನ್ನು ತೋರಿಸುತ್ತಲೇ ಮಹಾನ್ ಕಥನಗಳ ಕೆಡವಿ ಕಿರುಕಥನಗಳನ್ನು ಹಾಡುತ್ತವೆ. ಹಿರೋಶಿಮ–ನಾಗಾಸಾಕಿಗಳ ಮೇಲಿನ ಅಣುಬಾಂಬ್ ದಾಳಿಯ ನಂತರದ ಬದುಕನ್ನು ಬಿಡಿಬಿಡಿಯಾಗಿ ಕಟ್ಟುವ ಅವನ ಮೊದಲೆರಡು ಕಾದಂಬರಿಗಳು ಇತಿಹಾಸದ ನೇರ ನಿರೂಪಣೆಗಳಲ್ಲ; ಕಣ್ಣಿಗೆ ಕಾಣುವ ದುಃಖ ದುರಂತಗಳ ಪಡಿಯಚ್ಚುಗಳಲ್ಲ. ಬದಲಿಗೆ ಆ ದುರಂತದಲ್ಲಿ ಆಘಾತಗೊಂಡ, ಬದುಕು ಕಳೆದುಕೊಂಡ, ಸಾಮೂಹಿಕ ಸಾವನ್ನು ಕಂಡು ತತ್ತರಿಸಿ ಹೋದ ವ್ಯಕ್ತಿಗಳ ಆಂತರಿಕ ತುಮುಲಗಳೇ ಈ ಕಾದಂಬರಿಗಳು. ನೆನಪು ಮತ್ತು ನೋವುಗಳೊಂದಿಗೆ ಸಾಗುವ ಇಲ್ಲಿಯ ಕಥಾಹಂದರಗಳು ಎರಡನೇ ವಿಶ್ವಯುದ್ಧವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಮನುಷ್ಯರ ಒಳಹೊರಗುಗಳನ್ನು ನಿಕಷಕೊಡ್ಡುತ್ತವೆ. ಯುದ್ಧ ಎಂಬ ಮಹಾಕಥನದ ನಿರೂಪಣೆಗಳೆದುರು ಯುದ್ಧದಿಂದ ಜರ್ಜರಿತಗೊಂಡ ವೈಯುಕ್ತಿಕ ಬದುಕಿನ ಕಿರುಕಥನಗಳು ಇಂಗ್ಲಿಷ್ ಓದುಗರ ಸೆಳೆಯುತ್ತಿದ್ದ ಕಾಲಘಟ್ಟದಲ್ಲಿ ಬಂದ ಇಜಿಗಾರೊನ ಬರಹಗಳು ಹಲವರ ಪ್ರಶಂಸೆ, ಮೆಚ್ಚುಗೆ ಗಳಿಸಿದಷ್ಟೇ ವಿಮರ್ಶೆಗೊಳಪಟ್ಟವು. **Provincial Writer**(ಪ್ರಾಂತೀಯ ಬರಹಗಾರ) ಎನ್ನುವ ಹಣೆಪಟ್ಟಿಯಿಂದ ಬಿಡಿಸಿಕೊಳ್ಳಲೊ ಎಂಬಂತೆ ಮುಂದಿನ ದಿನಗಳಲ್ಲಿ ಆತ ವಿವಿಧ ಕಾಲಘಟ್ಟ, ಸ್ಥಳ, ಸಮೂಹಗಳ ಕಥಾನಕಗಳನ್ನು ತೆರೆದಿಟ್ಟು ಕೆಲವರ ಹುಬ್ಬೇರಿಸಿದ. ಶತಮಾನಗಳ ಹಿಂದಿನ ಬ್ರಿಟನ್ ಸಮಾಜವನ್ನು ತನ್ನ ಕಥಾಹಂದರಕ್ಕೆ ತಂದು ತನ್ನ ಪ್ರಾಂತೀಯ ಬರಹದಿಂದ ಹೊರಬಂದು ಜಾಗತಿಕ ವಸ್ತುಗಳುಳ್ಳ ಕಥೆಯನ್ನು ತಾನು ಬರೆಯಬಲ್ಲೆ ಎಂದು ಬೀಗಿದ. ಒಟ್ಟಿನಲ್ಲಿ ಅವನ ಬರಹಗಳಲ್ಲಿ ಬರುವ ಬಹುತೇಕ ಪಾತ್ರಗಳು ತಮ್ಮ ಕಳೆದು ಹೋದ ಬದುಕನ್ನು, ತೀವ್ರ ಗಳಿಗೆಗಳನ್ನು ನೆನಪಿಸಿಕೊಳ್ಳುತ್ತಾ ನಮ್ಮನ್ನವು ಹಿಂದಕ್ಕೂ ಮುಂದಕ್ಕೂ ಓಲಾಡಿಸುತ್ತವೆ. ವಿಶ್ವವಿದ್ಯಾಲಯದ ಅಂಗಳದಲ್ಲಿ ಬೆಳೆದ ಈತನಿಗೆ ಸಾಮಾನ್ಯರ ಬದುಕಿನ ಆಪ್ತ ಪರಿಚಯವಿತ್ತು.

ಲಂಡನ್‌ನ ನಿರ್ಗತಿಕರ ಒಳಿತಿಗಾಗಿ ಕೆಲಸ ಮಾಡುತ್ತಾ ತನ್ನ ಬದುಕನ್ನು ಆರಂಭಿಸಿದ್ದರಿಂದಲೊ ಏನೊ ಇಜಿಗಾರೊನಿಗೆ ಮಾನವ ಲೋಕದ ನೋವು, ಹಿಂಸೆ, ಹಸಿವು, ಬೇಗುದಿ, ಆಸೆ–ಕಾಮಗಳು ತೀವ್ರವಾಗಿ ತಟ್ಟಿರಬೇಕು. ಹಾಗಾಗಿಯೇ ಅವನ ಬಹುತೇಕ ಕಥನಗಳು ಮನುಷ್ಯರ ಒಳತೋಟಿಗೆ ಸಂಬಂಧಿಸಿದವೇ ಆಗಿವೆ. ತಲ್ಲಣಗೊಂಡು ನಿಲ್ಲುವ ಅವನ ಅನೇಕ ಪಾತ್ರಗಳು ಪ್ರತಿ ಪುಟದಲ್ಲೂ ನಿಜಮನುಷ್ಯರಂತೆ ಉಸಿರಾಡುತ್ತಾ ಅವರ 'ನಿಜ'ಗಳ ಮುಖೇನ ಓದುಗರನ್ನು ಬೆಚ್ಚಿಬೀಳಿಸುತ್ತವೆ. ಕೆಲವೊಮ್ಮೆ ಆ ನಿಜಗಳು ಗೊಂದಲಕ್ಕೀಡುಮಾಡಿ ನಮ್ಮನ್ನು ನಿಜದ ಹತ್ತಾರು ಅರ್ಥಸಾಧ್ಯತೆಗಳೆದುರು ಮುಖಾಮುಖಿಯಾಗಿಸುತ್ತವೆ. ನಾನು ಅರ್ಥೈಸಿಕೊಂಡಂತೆ ಅವನ ಬರಹಗಳು ಇತಿಹಾಸದ ಘೋರ ಅನ್ಯಾಯಗಳನ್ನು ನಮಗೆ